70	ಬಿ.ಎಸ್. ನಾಗಲಾಪೂ ಹೂಲಿಕೇರಿ	211	61	-	272
71	ಡಿ.ಎಸ್. ಕಾಳಿ ಲಾಭಗಟ್ಟಿ	185	99	-	284
72	ಜಿ.ಎಸ್. ದಂಡಿನ ಕಲ್ಲೂರ	394	134	-	528
	ಒಟ್ಟು	**25749**	**13207**	**-**	**38956**

ಪಡಿತರ ಚಿಮಣಿ ಎಣ್ಣೆ ವಿತರಣೆಯಲ್ಲಿ ದೋಷ

183 - ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ) : ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸೀಮೆಎಣ್ಣೆ ವಿತರಣೆಯಲ್ಲಿ ದೋಷ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜನತೆಗೆ ಸರಿಯಾಗಿ ಸೀಮೆ ಎಣ್ಣೆ ಪೂರೈಸುವಲ್ಲಿ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಇ) ಪಡಿತರ ಅಂಗಡಿಗಳ ವಿತರಣೆಯ ಉಸ್ತುವಾರಿ ಸಲುವಾಗಿ ಶಾಸಕರ ನೇತ್ರತ್ವದಲ್ಲಿ ಕಮಿಟಿಗಳನ್ನು ರಚಿಸಲು ಸರ್ಕಾರದ ಉದ್ದೇಶವೇನಾದರೂ ಇದೆಯೇ?

ಶ್ರೀ ಎನ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು.

ಆ) ಸೀಮೆಎಣ್ಣೆಯನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡಲು ಮೇಲುಸ್ತುವಾರಿ ನೋಡಿಕೊಳ್ಳುವಂತೆ ಸೂಚನೆ ನೀಡಲಾಗಿದೆ. ಇದರಿಂದ ವಿತರಣೆಯಲ್ಲಿ ಲೋಪದೋಷಗಳು ಕಂಡು ಬಂದಾಗ ಅಗತ್ಯ ವಸ್ತುಗಳ ಕಾಯ್ದೆಯಡಿಯಲ್ಲಿ ಉಗ್ರಕ್ರಮಕೈಗೊಳ್ಳಲಾಗುತ್ತಿದೆ. ಮೈಸೂರು ಜಿಲ್ಲೆ, ಕೆ.ಆರ್.ನಗರದ ತಾಲ್ಲೂಕಿನಲ್ಲಿ ಗುರುತಿನ ಚೀಟಿ ಮೂಲಕ ಸೀಮೆಎಣ್ಣೆ ವಿತರಣೆ ಮಾಡಲಾಗುತ್ತಿದೆ. ಇದರಿಂದ ವಿತರಣೆಯಲ್ಲಿ ಕಂಡು ಬರುವ ಲೋಪದೋಷಗಳನ್ನು ಸುಧಾರಿಸಬಹುದು. ಈ ಪದ್ದತಿಯಲ್ಲಿ ರಾಜ್ಯದ ಇತರ ಭಾಗಗಳಲ್ಲಿ ಜಾರಿಗೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ) ಇಲ್ಲ.

ರಾಜ್ಯದ ಮುಖ್ಯ ಇಂಜಿನೀಯರ್‌ಗಳ ಬಗ್ಗೆ

184 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿಯ ಚೀಫ್ ಇಂಜಿನಿಯರಗಳ ಸಂಖ್ಯೆ ಎಷ್ಟು ಜವಾಬ್ದಾರಿ ಕೆಲಸಗಳಾವುವು?